# ಮಾನಸ ವಾಣಿ


**ಶುಭನುಡಿ**

ಗೊತ್ತು ಗುರಿಯಿಲ್ಲದ
ಓಟಕ್ಕಿಂತ, ನಿರ್ದಿಷ್ಟ ಗುರಿ
ಹೊಂದಿರುವ ನಡಿಗೆ ಲೇಸು.

| ಅಜ್ಞಾತ


ಸಂಪುಟ–49 ಸಂಚಿಕೆ–01 ಸೋಮವಾರ 19–10–2020 ಪುಟ–04









# ಮೈಸೂರು ವಿ.ವಿ: ಭವಿಷ್ಯ ನಿರ್ಮಾಣದ ಕೇಂದ್ರ

## ವಿಶ್ವವಿದ್ಯಾಲಯದ 100ನೇ ವಾರ್ಷಿಕ ಘಟಿಕೋತ್ಸವ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ

ಮೈಸೂರು: 'ಮೈಸೂರು ವಿಶ್ವವಿದ್ಯಾಲಯವು ಪ್ರಾಚೀನ ಭಾರತದ ಸಮೃದ್ಧ ಶಿಕ್ಷಣದ ಪ್ರಮುಖ ಕೇಂದ್ರ ಹಾಗೂ ಭಾರತದ ಭವಿಷ್ಯ ನಿರ್ಮಾಣದ ಸಾಮರ್ಥ್ಯ ಹೊಂದಿರುವ ಕೇಂದ್ರ ಕೂಡ' ಎಂದು ಪ್ರಧಾನಿ ನರೇಂದ್ರ ಮೋದಿ ಶ್ಲಾಘಿಸಿದರು.

ಕ್ರಾಫರ್ಡ್ ಹಾಲ್ ಸಭಾಂಗಣದಲ್ಲಿ ಸೋಮವಾರ ಮೈಸೂರು ವಿಶ್ವವಿದ್ಯಾಲಯ ಆಯೋಜಿಸಿದ್ದ 100ನೇ ವಾರ್ಷಿಕ ಘಟಿಕೋತ್ಸವದಲ್ಲಿ ಅವರು ವರ್ಚುಯಲ್ ವೇದಿಕೆಯಲ್ಲಿ ನವದೆಹಲಿಯಿಂದ ಮಾತನಾಡಿದರು.

'ಯುವಕರಲ್ಲಿ ಹೆಚ್ಚು ಸ್ಪರ್ಧಾತ್ಮಕತೆ ಬೆಳೆಸಲು, ಬಹು ದೃಷ್ಟಿಕೋನದಲ್ಲಿ ಯೋಚಿಸುವಂತೆ ಮಾಡಲು ನೂತನ ಶಿಕ್ಷಣ ನೀತಿ ಸಹಕಾರಿ ಆಗಲಿದೆ. ಆದ್ದರಿಂದ ಮೈಸೂರು ವಿಶ್ವವಿದ್ಯಾಲಯವು ಮುಂಚೂಣಿಯಲ್ಲಿ ನಿಂತು ಈ ನೀತಿ ಅಳವಡಿಸಿ ಕೊಳ್ಳಬೇಕು. ಇನ್ಕ್ಯುಬೇಷನ್ ಘಟಕ, ತಾಂತ್ರಿಕ ಶಿಕ್ಷಣದಲ್ಲಿ ಸುಧಾರಣೆ ಮಾಡಿ ಜಾಗತಿಕ ವಿಷಯಗಳ ಜೊತೆ ಸ್ಥಳೀಯ ವಿಚಾರಗಳ ಸಂಶೋಧನೆಗೂ ಮಹತ್ವ ನೀಡಬೇಕು' ಎಂದು ಸಲಹೆ ನೀಡಿದರು.



ಪ್ರಧಾನಿ ನರೇಂದ್ರ ಮೋದಿ ಅವರು 100ನೇ ಘಟಿಕೋತ್ಸವ ಉದ್ದೇಶಿಸಿ ವರ್ಚುಯಲ್ ವೇದಿಕೆಯಲ್ಲಿ ಮಾತನಾಡಿದರು

ನೂತನ ಶಿಕ್ಷಣ ನೀತಿ ಅನ್ವಯ ಮೈಸೂರು ವಿಶ್ವವಿದ್ಯಾಲಯ ಆರಂಭಿಸುತ್ತಿರುವ ಬಹುಶಿಸ್ತೀಯ ಅಧ್ಯಯನ ಕಾರ್ಯಕ್ರಮವನ್ನು ಶ್ಲಾಘಿಸಿದರು.

'ಶಿಕ್ಷಣ ಹಾಗೂ ದೀಕ್ಷೆ ಯುವಕರ ಪ್ರಮುಖ ಎರಡು ಕಾಲಘಟ್ಟಗಳು. ದೀಕ್ಷೆ ಎಂಬುದು ಕೇವಲ ಪದವಿ ಪಡೆಯುವ ಅವಕಾಶ ಮಾತ್ರವಲ್ಲ; ಜೀವನದ ಮುಂದಿನ ಕಾಲಘಟ್ಟಕ್ಕೆ ತೆಗೆದುಕೊಳ್ಳುವ ಹೊಸ ನಿರ್ಣಯ ಕೂಡ' ಎಂದು ಕಿವಿಮಾತು ಹೇಳಿದರು.

'ಪದವಿ ಎಂಬುದು ಪ್ರತಿ ವಿದ್ಯಾರ್ಥಿಯ ಜೀವನದಲ್ಲೂ ಪ್ರಮುಖ ಘಟ್ಟ. ವಿಶ್ವವಿದ್ಯಾಲಯವು ಕೇವಲ ಪದವಿಯನ್ನಷ್ಟೇ ನೀಡುತ್ತಿಲ್ಲ. ಜವಾಬ್ದಾರಿಯನ್ನೂ ಹೆಗಲ ಮೇಲೆ ಹೊರಿಸಿದೆ. ಈಗ ಕಾಲೇಜಿನ ಕ್ಯಾಂಪಸ್ ದಾಟಿ ಜೀವನದ ಕ್ಯಾಂಪಸ್‌ಗೆ ಪ ಕಾಲಿಡುತ್ತಿದ್ದೀರಿ. ತಮ್ಮ ಜ್ಞಾನವನ್ನು ನಿಜ ಜೀವನದಲ್ಲಿ ವಿನಿಯೋಗಿಸಿದರೆ ಏನಾದರೂ ಸಾಧನೆ ಮಾಡಲು ಸಾಧ್ಯ. ಮಿತಿಯೊಳಗೆ ಸಿಲುಕಬೇಡಿ, ದೊಡ್ಡಮಟ್ಟದಲ್ಲಿ ಸಾಧನೆ ಮಾಡಲು ಮುಂದಾಗಿ' ಎಂದು ಅವರು ಸಲಹೆ ನೀಡಿದರು.

ವೈದ್ಯಕೀಯ ಶಿಕ್ಷಣದಲ್ಲಿ ಪಾರದರ್ಶಕತೆ ತರುವ ನಿಟ್ಟಿನಲ್ಲಿ ರಾಷ್ಟ್ರೀಯ ವೈದ್ಯಕೀಯ ಆಯೋಗ ಸ್ಥಾಪನೆಯಾಗಿದೆ. ಹೋಮಿಯೋಪತಿ ಮತ್ತು ಭಾರತೀಯ ವೈದ್ಯ ಪದ್ಧತಿ ಕಲಿಸಲಾಗುತ್ತಿದೆ. ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಈ ಬದಲಾವಣೆಗಳಿಂದ ಭವಿಷ್ಯದಲ್ಲಿ ಹೆಚ್ಚು ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ಓದುವ ಅವಕಾಶ ಲಭಿಸಲಿದೆ ಎಂದು ಇದೇ ಸಂದರ್ಭದಲ್ಲಿ ಅವರು ಹೇಳಿದರು.

ಈ ಘಟಿಕೋತ್ಸವದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಪದವಿ ಮುಗಿಸಿರುವುದು ಖುಷಿಯ ವಿಚಾರ. ನಾಲ್ಕು ವರ್ಷಗಳ ಹಿಂದೆ ಐಐಟಿಗಳಲ್ಲಿ ಶೇ 8ರಷ್ಟು ಯುವತಿಯರಿದ್ದರು. ಈ ವರ್ಷ ಶೇ 20 ರಷ್ಟು ಆಗಿದೆ ಎಂದು ವಿದ್ಯಾರ್ಥಿನಿಯರ ಸಾಧನೆಯನ್ನು ಕೊಂಡಾಡಿದರು.

ಇದಕ್ಕೂ ಮೊದಲು ವಿಶ್ವವಿದ್ಯಾಲಯದ .


3ನೇ ಪುಟ್ಟಕ್ಕೆ.....


## ಚಿನ್ನದ ಬೇಟೆ: ವಿದ್ಯಾರ್ಥಿನಿಯರ ಸಂಭ್ರಮ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ ನೂರನೇ ಘಟಿಕೋತ್ಸವದಲ್ಲಿ ರೂಪಿಣಿ 11 ಚಿನ್ನದ ಪದಕ, 2 ನಗದು ಬಹುಮಾನ ಪಡೆಯುವ ಮೂಲಕ ಅತಿ ಹೆಚ್ಚು ಪದಕ ಪಡೆದ ಹೆಗ್ಗಳಿಕೆಗೆ ಪಾತ್ರರಾದರು.

ಸೋಮವಾರ ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ನಡೆದ ನೂರನೆಯ ಘಟಿಕೋತ್ಸವದಲ್ಲಿ ಎಂ ಎಸ್ಸಿ ರಸಾಯನಶಾಸ್ತ್ರ ವಿಭಾಗದ ರೂಪಿಣಿ ಅವರ 11 ಚಿನ್ನದ ಪದಕ ಮತ್ತು ಎರಡು ನಗದು ಬಹುಮಾನ ಪಡೆದರೆ ಎಂಎ ಅರ್ಥಶಾಸ್ತ್ರ ವಿಭಾಗದಲ್ಲಿ ಧನಲಕ್ಷ್ಮಿ 9 ಚಿನ್ನದ ಪದಕ ಮತ್ತು ನಾಲ್ಕು ನಗದು ಬಹುಮಾನ ತಮ್ಮದಾಗಿಸಿಕೊಂಡಿದ್ದಾರೆ. ಎಂಎಸ್ಸಿ ಸಸ್ಯಶಾಸ್ತ್ರದಲ್ಲಿ ಎಂ.ಜೆ. ಶಾಲಿನಿ ಏಳು ಚಿನ್ನದ ಪದಕ ಮತ್ತು ಮೂರು ನಗದು ಬಹುಮಾನ ಪಡೆದಿದ್ದಾರೆ. ಈ ವೇಳೆ ಮಾತನಾಡಿದ ರೂಪಿಣಿ ನನ್ನ ಪೋಷಕರು ಓದಿಗೆ ಅಪಾರ ಬೆಂಬಲ ನೀಡಿದ್ದಾರೆ. ತಮ್ಮ ಬದುಕನ್ನು ನನಗಾಗಿ ತ್ಯಾಗ ಮಾಡಿದ್ದಾರೆ. ಬಾಡಿಗೆ ಮನೆಯಲ್ಲಿದ್ದರೂ ಓದಿಗಾಗಿ ಶ್ರಮಿಸಿ ಈ ಸ್ಥಾನ ನೀಡಿದ್ದಾರೆ. ಪೋಷಕರೆ ಸ್ಟೇ ಉಪನ್ಯಾಸಕರ ಸಹಕಾರ ನನ್ನ ಈ ಸಾಧನೆಗೆ ಕಾರಣವಾಗಿದೆ. ಆದ್ದರಿಂದ ಈ ಗೆಲುವನ್ನು ಅವರಿಗೆ ಅರ್ಪಿಸುತ್ತೇನೆ.



ಮೈಸೂರು ವಿಶ್ವವಿದ್ಯಾಲಯ ಘಟಿಕೋತ್ಸವದಲ್ಲಿ ವಿವಿಧ ವಿಭಾಗಗಳಲ್ಲಿ ಪದಕ ಪಡೆದವರ ಸಂಭ್ರಮ

ಪೋಷಕರ ಸಹಕಾರ ದೊಡ್ಡದು ಪ್ರಸ್ತುತ ಗೋಪಾಲಸ್ವಾಮಿ ಪಿಯು ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸ ಮಾಡುತ್ತಿದ್ದು, ಪಿಎಚ್ಡಿ ಮಾಡಬೇಕು ಮೈಸೂರು ವಿವಿಯಲ್ಲಿಯೇ ಉಪನ್ಯಾಸಕಿಯಾಗ ಬೇಕು ಎಂಬ ಕನಸಿದೆ ಎಂದರು.

9 ಚಿನ್ನದ ಪದಕ ಪಡೆದ ಧನಲಕ್ಷ್ಮಿ ಮಾತನಾಡಿ, ಮರಿಮಲ್ಲಪ್ಪ ಕಾಲೇಜಿನಲ್ಲಿ ಪದವಿ ಪಡೆದು, ಮೈಸೂರು ವಿವಿಯ ಮಾನಸಗಂಗೋತ್ರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದೇನೆ. ಒಂಬತ್ತು ಚಿನ್ನದ ಪದಕ ಪಡೆದಿರುವುದು ಮುಂದಿನ ಸಾಧನೆಗೆ ಮೆಟ್ಟಿಲು. ಯುಪಿಎಸ್ಸಿ ಪರೀಕ್ಷೇ ತೆಗೆದುಕೊಳ್ಳಲು ಸಿದ್ಧತೆ ನಡೆಸುತ್ತಿದ್ದೇನೆ. ಓದುವುದನ್ನು ಗಂಭೀರವಾಗಿ ಪರಿಗಣಿಸಿದೆ. ಈಗ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿದೆ. ಪೋಷಕರ ಸಹಕಾರ ದೊಡ್ಡದು ಎಂದರು. 7ಚಿನ್ನದ ಪದಕ ಪಡೆದ ಟರಿ ಶಾಲಿನಿ ಮಾತನಾಡಿ, ಶಿವಮೊಗ್ಗದ ತೀರ್ಥಹಳ್ಳಿ ತಾಲೂಕಿನ ಮೃಗವಧೆ ಪುಟ್ಟಗ್ರಾಮದ ನನ್ನದು. ಅಪ್ಪ ಜಯ ಶಿವಮೂರ್ತಿ ಅಡಿಕೆ, ಭತ್ತ ಬೆಳೆಗಾರರು. ನನ್ನ ಓದಿಗೆ ಅವರೇ ಸ್ಪೂರ್ತಿ. ಹೀಗಾಗಿ ಸಸ್ಯಶಾಸ್ತ್ರವನ್ನು ಆಯ್ಕೆಮಾಡಿಕೊಂಡ. ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕೆಲಸದೊಂದಿಗೆ ಪಿ ಎಚ್ ಡಿ ಮಾಡುತ್ತಿದ್ದೇನೆ. ಏಳು ಚಿನ್ನದ ಪದಕ ಗಳಿಸಿರುವುದು ಬಹಳ ಸಂತೋಷವಾಗಿದೆ. ಒಬ್ಬಳೇ ಮಗಳು ಗೋಲ್ಡ್ ಮೆಡಲಿಸ್ಟ್ ಎಂದು ಮನೆಯವರಿಗೆ ತುಂಬಾ ಖುಷಿಯಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

## ಸುಧಾಮೂರ್ತಿಗೆ ಗೌರವ ಡಾಕ್ಟರೇಟ್ ಪ್ರದಾನ



ಮೈಸೂರು: ಇನ್ಫೋಸಿಸ್ ಫೌಂಡೇಶನ್ ಸುಧಾಮೂರ್ತಿ ಅವರಿಗೆ ಮೈಸೂರು ವಿವಿಯು ಅವರ ಅನುಪಸ್ಥಿತಿಯಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಿತು. ಮೈಸೂರು ವಿವಿ ಕ್ರಾಫರ್ಡ್ ಭವನದಲ್ಲಿ ಸೋಮವಾರ ನಡೆದ 100ನೇ ಘಟಿಕೋತ್ಸವ ಸಮಾರಂಭದಲ್ಲಿ ಅವರ ಅನುಪಸ್ಥಿತಿಯಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡುವುದಾಗಿ ಕುಲಪತಿ ಪ್ರೊಫೆಸರ್ ಜಿ ಹೇಮಂತ ಕುಮಾರ್ ಕುಮಾರ್ ತಿಳಿಸಿದರು. ಸಮಾಜಸೇವೆ, ಶಿಕ್ಷಣ, ಸಾಹಿತ್ಯ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ನ ಅವರ ಸಾಧನೆಯನ್ನು ಕುಲಪತಿಗಳು ಸ್ಮರಿಸಿದರು.

## ಕೋವಿಡ್ ಕಾಲದ ಘಟಿಕೋತ್ಸವ

ಕೋವಿಡ್–19 ಕಾರಣ ಮೈಸೂರಿನ ವಿಶ್ವವಿದ್ಯಾಲಯದಲ್ಲಿ ಘಟಿಕೋತ್ಸವ ವೇಳೆ ಸಾಕಷ್ಟು ಮುಂಜಾಗ್ರತಾ ಕ್ರಮ ವಹಿಸಲಾಗಿತ್ತು. ಅಂತರ ಕಾಯ್ದುಕೊಳ್ಳಲು ಆಸನ ವ್ಯವಸ್ಥೆ ಮಾಡಲಾಗಿತ್ತು. ಆದರೂ ನಿಗದಿಪಡಿಸಿದಕ್ಕಿಂತ ಹೆಚ್ಚಿನ ಜನ ಸೇರಿದ ಕಾರಣ ಕೊನೆಯಲ್ಲಿ ಅಂತರ ಮಾಯವಾಗಿತ್ತು.

ಅತಿ ಹೆಚ್ಚು ಸ್ವರ್ಣ ಪದಕ ನಗದು ಬಹುಮಾನ

ಆರ್.ರೂಪಿಣಿ(ಎಂ.ಎಸ್ಸಿ ರಾಸಾಯನಿಕ ವಿಜ್ಞಾನ)11 ಪದಕ,
2 ನಗದು ಬಹುಮಾನ

ಆರ್.ಧನಲಕ್ಷ್ಮಿ (ಎಂ.ಎ ಅರ್ಥಶಾಸ್ತ್ರ)9 ಪದಕ, 4 ನಗದು ಬಹುಮಾನ

ಶ್ರಿಯ್ ತನೇಜಾ (ಎಂ.ಎ ಸಂಸ್ಕೃತ)8 ಪದಕ, 2 ನಗದು ಬಹುಮಾನ

ಸುನೀತಾ (ಎಂ.ಎ ಕನ್ನಡ)7 ಪದಕ, 5 ನಗದು ಬಹುಮಾನ

ಎಂ.ಜೆ.ಶಾಲಿನಿ (ಎಂ.ಎಸ್ಸಿ ಸಸ್ಯಶಾಸ್ತ್ರ)7 ಪದಕ, 3 ನಗದು ಬಹುಮಾನ

ಎಚ್. ವಿ. ಮಹಾಲಕ್ಷ್ಮಿ (ಎಂ.ಎಸ್ಸಿಗ್ರಂಥಾಲಯ ವಿಜ್ಞಾನ)7 ಪದಕ, 1 ನಗದು ಬಹುಮಾನ

ಕೆ.ಜೆ.ಕೆಂಪರಾಜು (ಎಂ.ಎ ಕನ್ನಡ)6 ಪದಕ, 4 ನಗದು ಬಹುಮಾನ



# ಮೈಸೂರು ವಿಶ್ವ ವಿದ್ಯಾಲಯದ 100ನೇ ಘಟಿಕೋತ್ಸವ


ವೈಸೂರು; ವೈಸೂರು ವಿಶ್ವವಿದ್ಯಾಲಯದ 100ನೇ ಘಟಿಕೋತ್ಸವ ಸಮಾರಂಭವು ಸೋಮವಾರ ವರ್ಚುವಲ್‌ಕಾಯ ಕ್ರಮದ ಮೂಲಕ ಮೈಸೂರು ವಿವಿಯ ಕ್ರಾಫಡ್ ಭವನದಲ್ಲಿನಡೆಯಿತು.

ಕ್ರಾಫಡ್ ಭವನದಲ್ಲಿ ನಡೆದ ಐತಿಹಾಸಿಕ ಕಾಯ ಕ್ರಮದಲ್ಲಿ ಉನ್ನತ ಶಿಕ್ಷಣ ಸಚಿವಡಾ.ಅಶ್ವತ್ಥ ನಾರಾಯಣ, ಕುಲಪತಿ ಪ್ರೊ. ಹೇಮಂತ್ ಕುಮಾರ್, ಕುಲಸಚಿವರು ಸೇರಿದಂತೆ ಪ್ರಮುಖರು ಭಾಗಿಯಾಗಿದ್ದರು.29,018 ವಿದ್ಯಾಥಿ9ಗಳಿಗೆ ವಿವಿಧ ಪದವಿ ಪ್ರದಾನ ಮಾಡಲಾಯಿತು.ಮೈಸೂರು ವಿವಿಯಲ್ಲಿ ಪುರುಷರೇ ಮೇಲುಗೈ ಸಾಧಿಸಿದ್ದು,18344( ಶೇ.63.22) ವಿದ್ಯಾಥಿ9ಗಳು 10,674 (ಶೇ.36.78) ವಿದ್ಯಾರ್ಥಿ ನಿಯರಿಗೆ ಪದವಿ ಪ್ರದಾನ ಮಾಡಲಾಯಿತು.

ಅಗ್ರಿ ಬಿಸಿನೆಸ್ ವಿಭಾಗದಲ್ಲಿ ಮನೋಜ್ ರಂಜನ್ ಅವರಿಗೆ 'ಡಿಲಿಟ್ ' ನೀಡಿ ಗೌರವಿಸಲಾಗಿದೆ. 654 ವಿದ್ಯಾರ್ಥಿಗಳಿಗೆ ಪಿಎಚ್ ಡಿ ಪದವಿ ಪ್ರದಾನಿಸಲಾಗಿದ್ದು, 264 ಮಹಿಳೆ, 390 ಪುರುಷರಿಗೆ ಪಿಎಚ್ ಡಿ ಪದವಿ ಪ್ರದಾನಿಸಲಾಗಿದೆ.ಒಟ್ಟು 392 ಪದಕ, 198 ಬಹುಮಾನ ನೀಡಲಾಗಿದೆ. 7,971 ವಿದ್ಯಾರ್ಥಿಗಳಿಗೆ ಸ್ನಾತಕೋತರ ಪದವಿ, 20,393 ಅಭ್ಯರ್ಥಿಗಳಿಗೆ ಸ್ನಾತಕ ಪದವಿ ಪ್ರಧಾನ ಮಾಡಲಾಯಿತು.

ಇನ್ಫೋಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾ ಮೂರ್ತಿ ಅವರ ಅನುಪಸ್ಥಿತಿಯಲ್ಲಿ ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್ ಮೈಸೂರು ವಿವಿ ಕುಲಪತಿ ಪ್ರೊ.ಹೇಮ0ತ್ ಕುಮಾರ್ ಪ್ರದಾನ ಮಾಡುತ್ತಿರುವುದಾಗಿ ಹೇಳಿದರು.

ಸಮಾಜ ಸೇವೆ, ಶಿಕ್ಷಣ , ಸಾಹಿತ್ಯ ಕ್ಷೇತ್ರಗಳಲ್ಲಿ ಸುಧಾಮೂರ್ತಿ ಅವರ ಸೇವೆಯನ್ನು ಇದೇ ವೇಳೆ ಕುಲಪತಿಗಳು ಸ್ಮರಿಸಿದರು.




ಕುಲಪತಿ ಪ್ರೊ.ಜಿ.ಹೇಮಂತಕುಮಾರ್ ಮಾತನಾಡಿದರು. ಪ್ರೊ.ಆರ್.ಶಿವಪ್ಪ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಪ್ರೊ.ಕೆ.ಎಂ.ಮಹದೇವನ್ ಇದ್ದಾರೆ

ಮೈಸೂರು ವಿಶ್ವವಿದ್ಯಾಲಯದ 100ನೇ ಘಟಿಕೋತ್ಸವದಲ್ಲಿ ಏಳು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಸ್ವರ್ಣ ಪದಕ ಹಾಗೂ ನಗದು ಬಹುಮಾನವನ್ನು ತಮ್ಮದಾಗಿಸಿಕೊಂಡಿದ್ದಾರೆ.

ಅತ್ಯುತ್ತಮ ಸಾಧನಗೈದಿರುವ ಏಳು ಸ್ನಾತಕ ೋತ್ತರ ಪದವಿ ವಿದ್ಯಾರ್ಥಿಗಳಿಗೆ ಸ್ವರ್ಣ ಪದಕ ಹಾಗೂ ನಗದು ಬಹುಮಾನವನ್ನು ಪ್ರದಾನ ಮಾಡಲಾಯಿತು. ಎಂ.ಎ ಕನ್ನಡದಲ್ಲಿ ಮೂವರು ವಿದ್ಯಾರ್ಥಿಗಳು, ಎಂಎಸ್ ಸಿ ಯಲ್ಲಿಇಬ್ಬರು ಚಿನ್ನದ ಪದಕ ಹಾಗೂ ನಗದು ಬಹುಮಾನ ಪಡೆದುಕೊಂಡಿದ್ದಾರೆ.

ಎಂ.ಎ ಕನ್ನಡದಲ್ಲಿ ಸುನೀತಾ 7 ಚಿನ್ನದ ಪದಕ, 5ನಗದು ಬಹುಮಾನ , ಪಿ ರೇಣುಕಾ 6 ಚಿನ್ನದ ಪದಕ, 5ನಗದು ಬಹುಮಾನ, ಕೆ.ಜಿ. ಕೆಂಪರಾಜು 6 ಚಿನ್ನದ ಪದಕ , 4 ನಗದು ಬಹುಮಾನ ಪಡೆದುಕೊಂಡು ಸಂಭ್ರಮಿಸಿದ್ದರು.

ಎಂ.ಎಸ್.ಸಿ ರಸಾಯನಶಾಸ್ತ್ರದಲ್ಲಿ ಆರ್.ರೂಪಿಣಿ 11ಚಿನ್ನದ ಪದಕ ,2 ನಗದು ಬಹುಮಾನ, ಎಂ.ಎಸ್. ಸಿ ಸಸ್ಯಶಾಸ್ತ್ರದಲ್ಲಿ ಎಂ.ಜೆ ಶಾಲಿನಿ 7ಚಿನ್ನದ ಪದಕ ,3 ನಗದು ಬಹುಮಾನ ಪಡೆದುಕೊಂಡರು.

ಎಂ.ಎ ಅರ್ಥಶಾಸ್ತ್ರದಲ್ಲಿ ಆರ್. ಧನಲಕ್ಷ್ಮೀ ಚಿನ್ನದ ಪದಕ, 4 ನಗದು ಬಹುಮಾನ ಪಡೆದುಕೊ0ಡರೆ, ಎಂ.ಬಿ.ಎ ನಲ್ಲಿ ಮತ ನಗದು ಬಹುಮಾನಪ ಡೆದುಕೊಂಡರೆ. ಎಂ.ಬಿ.ಎ ತೇಜಸ್ವಿನಿ 5 ಚಿನ್ನದ ಪದಕ ಪಡೆದುಕೊಂಡರು.

## ಮೊದಲನೇ ಪುಟ್ಟದಿಂದ..

ಡಿಜಿಟಲ್ ಸೆಂಟರ್ ಹಾಗೂ ಡಿಜಿಟಲ್ ಸೈನ್ ಬೋರ್ಡ್, ಆಹಾರ ವಿಜ್ಞಾನ ಮತ್ತು ಪೋಷಣೆ ಅಧ್ಯಯನ ವಿಭಾಗ ಸೇರಿದಂತೆ ವಿವಿಧ ಸೌಲಭ್ಯಗಳಿಗೆ ಚಾಲನೆ ನೀಡಲಾಯಿತು.

ರಾಜ್ಯಪಾಲ ವಜುಭಾಯಿ ವಾಲಾ (ವರ್ಚುವಲ್ ವೇದಿಕೆ), ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ಕುಲಪತಿ ಪ್ರೊ.ಹೇಮಂತ್ ಕುಮಾರ್, ಕುಲಸಚಿವ ಪ್ರೊ.ಆರ್.ಶಿವಪ್ಪ ಇದ್ದರು

## ಮುಕ್ತ ವಿವಿ ಆನ್ಲೈನ್ ಕೋರ್ಸ್ ಆರಂಭಕ್ಕೆ ಅನುಮೋದನೆ



ಮೈಸೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಆನ್ಲೈನ್ ಕೋರ್ಸ್ಗಳ ಆರಂಭಕ್ಕೆ ಕುಲಪತಿ ಪ್ರೊಫೆಸರ್ ಎಸ್ ವಿದ್ಯಾಶಂಕರ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಶೈಕ್ಷಣಿಕ ಮಂಡಳಿ ಸಭೆ ಅನುಮೋದನೆ ನೀಡಿದೆ. 11 ಪದವಿ ತರಗತಿ ಹಾಗೂ 7ತರಗತಿ ಗಳ ಆನ್ಲೈನ್ ಕೋರ್ಸ್ ಆರಂಭಕ್ಕೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಮೋದನೆ ಲಭಿಸಿದೆ.

## ಮೈಸೂರು ವಿವಿ ಆನ್‌ಲೈನ್ ತರಗತಿ



ಮೈಸೂರು: ಯುಜಿಸಿ ನಿಯಮಾವಳಿ ಅನ್ವಯ ಪ್ರಸಕ್ತ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯವು ಪದವಿ ಹಾಗೂ ಸ್ನಾತಕೋತ್ತರ ಪದವಿಗಳಲ್ಲಿ ಮುಕ್ತ ಮತ್ತು ದೂರ ಶಿಕ್ಷಣ ಹಾಗೂ ಆನ್ಲೈನ್ ತರಗತಿ ಆರಂಭಕ್ಕೆ ಮುಂದಾಗಿದ್ದು, ಕುಲಪತಿ ಪ್ರೊಫೆಸರ್ ಜಿ ಏನಂತ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಶೈಕ್ಷಣಿಕ ಮಂಡಳಿ ಸಭೆ ಹಾಗೂ ಸಿಂಡಿಕೇಟ್ ಸಭೆಯಲ್ಲಿ ಕೋರ್ಸ್ಗಳ ಆರಂಭಕ್ಕೆ ಅನುಮೋದನೆ ಸಿಕ್ಕಿದೆ.

ಪದವಿ ವಿಭಾಗದಲ್ಲಿ ಮೂರು ಕೋರ್ಸ್ ಹಾಗೂ ಸ್ನಾತಕೋತ್ತರ ವಿಭಾಗದಲ್ಲಿ ಆರಂಭಕ್ಕೆ ವೈಸೂರು ವಿವಿ ಅರ್ಜಿಗಳನ್ನು ಆಹ್ವಾನಿಸಿದೆ

## ಶರತ್‌ಗೆ ಅನಾರೋಗ್ಯ-ಆಸ್ಪತ್ರೆಗೆ ದಾಖಲು



ಬಿ.ಶರತ್

ವೈಸೂರು: ಐಎಎಸ್ ಅಧಿಕಾರಿ ಬಿ.ಶರತ್ ಅವರು ಅನಾರೋಗ್ಯದ ಕಾರಣ ಇಲ್ಲಿ ಕುವೆಂಪುನಗರದ ಭಾನವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 'ಅ.17ರಂದು ಆಸ್ಪತ್ರೆಗೆ ದಾಖಲಾಗಿದ್ದಾರೆ. ಬೆನ್ನು ನೋವಿಗೆ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ' ಎಂದು ಶರತ್ ಅವರ ಆಪ್ತ ಮೂಲಗಳು ತಿಳಿಸಿವೆ

ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಅವರನ್ನು ಕೇವಲ 29 ದಿನಗಳಲ್ಲಿ ವರ್ಗಾವಣೆ ಮಾಡಲಾಗಿತ್ತು. ರಾಜ್ಯ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಕೇಂದ್ರೀಯ ಆಡಳಿತಾತ್ಮಕ ನ್ಯಾಯಾಧಿಕರಣ (ಸಿಎಟಿ) ಅ.23ಕ್ಕೆ ಮುಂದೂಡಿದೆ.

# ಮರದ ಅಂಬಾರಿಯ ತಾಲೀಮು ಆರಂಭ


## ಅಭಿಮನ್ಯು ನೇತೃತ್ವದ ಗಜಪಡೆಯಿಂದ ಜಂಬೂಸವಾರಿಗೆ ಸಿದ್ಧತೆ

ವೈಸೂರು: ಜಂಬೂ ಸವಾರಿಗೆ ದಿನಗಣನೆ ಆರಂಭವಾಗಿದೆ. ದಸರಾ ಉದ್ಘಾಟನೆಗೊಂಡ ಮರು ದಿನವೇ ಅಭಿಮನ್ಯು ನೇತೃತ್ವದ ಗಜಪಡೆಯ ತಾಲೀಮು ಸಹ ಬಿರುಸುಗೊಂಡಿದೆ.

ಅರಮನೆ ಆವರಣದಲ್ಲೇ ಇದು ವರೆಗೂ ಮರಳು ಮೂಟೆಯ ಭಾರ ಹೊತ್ತು ತಾಲೀಮು ನಡೆಸುತ್ತಿದ್ದ ಗಜ ಪಡೆ, ಭಾನುವಾರದಿಂದ ಚಿನ್ನದ ಅಂಬಾ ರಿಯನ್ನೇ ಹೋಲುವ ಮರದ ಅಂಬಾರಿ ಹೊತ್ತು ಹೆಜ್ಜೆ ಹಾಕಲು ಆರಂಭಿಸಿದೆ.

ವಿಜಯದಶಮಿಯಂದು ನಡೆಯಲಿರುವ ಜಂಬೂ ಸವಾರಿಯಲ್ಲಿ 750 ಕೆ.ಜಿ. ತೂಕದ ಚಿನ್ನದ ಅಂಬಾರಿ ಹೊತ್ತು, ರಾಜ ಗಾಂಭೀರ್ಯದೊಂದಿಗೆ ಸಾಗುವ ಗಜಪಡೆಯನ್ನು ಮುನ್ನಡೆಸುವ ಅಭಿಮನ್ಯು ಆನೆಯ ಮೇಲೆ ಭಾನುವಾರ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಯಿತು.

280 ಕೆ.ಜಿ. ತೂಕದ ಮರದ ಅಂಬಾರಿಯೊಳಗೆ 320ರಿಂದ 330 ಕೆ.ಜಿ. ತೂಕದ ಮರಳು ಮೂಟೆಗಳನ್ನಿಟ್ಟು, ಮುಕ್ಕಾಲು ತಾಸಿನ ಅವಧಿ ಅರಮನೆ ಆವರಣದೊಳಗೆ ಭಾನುವಾರ ತಾಲೀಮು ನಡೆಸಲಾಯಿತು. ಕುಮ್ಕಿ ಆನೆಗಳಾದ



ಮೈಸೂರು ಅರಮನೆಯ ಆವರಣದಲ್ಲಿ ಭಾನುವಾರ ಅಭಿಮನ್ಯು ಆನೆ ಮರದ ಅಂಬಾರಿ ಹೊತ್ತು ತಾಲೀಮು ನಡೆಸಿತು

ವಿಜಯ, ಕಾವೇರಿ ಸಾಥ್ ನೀಡಿದವು ಎಂದು ಆನೆಗಳ ವೈದ್ಯಕೀಯ ಉಸ್ತುವಾರಿ ನೋಡಿಕೊಳ್ಳುವ ಪಶು ವೈದ್ಯ ಡಾ.ನಾಗರಾಜ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಜಂಬೂ ಸವಾರಿಗೆ ಬೆರಳೆಣಿಕೆ ದಿನ ಬಾಕಿ ಉಳಿದಿದೆ. ಸೋಮವಾರದಿಂದ ಅಭಿಮನ್ಯುವಿನ ಮೇಲೆ ಹಾಕುವ ಮರಳು ಮೂಟೆಯ ಭಾರ ಹೆಚ್ಚಿಸಲಾಗುವುದು. ಈ ಬಾರಿ ಅರಮನೆ ಆವರಣದಲ್ಲೇ ಜಂಬೂ ಸವಾರಿ ನಡೆಯುವುದರಿಂದ ಹೆಚ್ಚಿನ ತಾಲೀಮು ನಡೆಸುತ್ತಿಲ್ಲ. ಅಗತ್ಯಕ್ಕನುಗುಣವಾದ ತಾಲೀಮು ನಡೆದಿದೆ. ಗಜಪಡೆಯ ಎಲ್ಲ ಆನೆಗಳು ಆರೋಗ್ಯದಿಂದಿವೆ' ಎಂದು ಅವರು ಹೇಳಿದರು.

'ಇದೇ ಮೊದಲ ಬಾರಿಗೆ ಅಭಿಮನ್ಯು ಚಿನ್ನದ ಅಂಬಾರಿ ಹೊರಲಿದೆ. ಈ ಹಿಂದಿನ ಹಲವು ದಸರಾಗಳಲ್ಲಿ ಭಾಗಿಯಾಗಿದ್ದ ಅನುಭವವಿದೆ. ಮರದ ಅಂಬಾರಿಯನ್ನು ಹೊತ್ತು ತಾಲೀಮು ನಡೆಸಿತ್ತು' ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದರು.

ಕ್ರೇನ್ ಬಳಸಿ ಅಭಿಮನ್ಯುವಿಗೆ ಮರದ ಅಂಬಾರಿ ಕಟ್ಟುವಾಗ ಹಾಗೂ ಅರಮನೆ ಆವರಣದಲ್ಲಿ ಗಜಪಡೆ ತಾಲೀಮು ನಡೆಸುವಾಗ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿ ಹೀರಾಲಾಲ್ ಹಾಗೂ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿ ಅಲೆಕ್ಸಾಂಡರ್ ಮತ್ತಿತರರು ಉಪಸ್ಥಿತರಿದ್ದರು.



# ಲಸಿಕೆಗೊಂದು ಸಮಗ್ರ ಯೋಜನೆ, ಲೋಪರಹಿತ ಕಾರ್ಯಕ್ರಮದ ಅಗತ್ಯ




ಕೋವಿಡ್–19 ಲಸಿಕೆಯ ಆವಿಷ್ಕಾರ ಅಂತಿಮ ಹಂತದಲ್ಲಿದೆ. ಕೋವಿಡ್ ಲಸಿಕೆ ಸಂಗ್ರಹಕ್ಕಾಗಿ ಕೋಲ್ಡ್ ಸ್ಟೊ?ರೇಜ್‌ಗಳ ಸಿದ್ಧತೆ, ಮೊದಲ ಹಂತದಲ್ಲಿ ಲಸಿಕೆಗಳನ್ನು ಯಾರಿಗೆ ನೀಡಬೇಕು ಎಂಬ ಬಗ್ಗೆ ಡೇಟಾಬೇಸ್ ಕಲೆಹಾಕುವಿಕೆ ಮತ್ತು ಪಟ್ಟಿಯ ಸಿದ್ಧತೆ– ಇವುಗಳೆಲ್ಲ ನಡೆಯುತ್ತಿವೆ.

ಲಸಿಕೆಗೊಂದು ಸಮಗ್ರ ಯೋಜನೆ ಲೋಪರಹಿತ ಕಾರ್ಯಕ್ರಮದ ಅಗತ್ಯ ಕೋವಿಡ್–19 ಲಸಿಕೆಯ ಆವಿಷ್ಕಾರ ಅಂತಿಮ ಹಂತದಲ್ಲಿದೆ. ಈ ಹಂತದಲ್ಲ? ಲಸಿಕೆಯ ಸಾಕಷ್ಟು ಸಂಗ್ರಹ ಹಾಗೂ ವಿತರಣೆಯ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳಲು ಸರಕಾರ ಮುಂದಾಗಿರುವುದು ಸ್ವಾಗತಾರ್ಹ.

ಕೋವಿಡ್ ಲಸಿಕೆ ಸಂಗ್ರಹಕ್ಕಾಗಿ ಕೋಲ್ಡ್ ಸ್ಟೊ?ರೇಜ್‌ಗಳ ಸಿದ್ಧತೆ, ಮೊದಲ ಹಂತದಲ್ಲಿ ಲಸಿಕೆಗಳನ್ನು ಯಾರಿಗೆ ನೀಡಬೇಕು ಎಂಬ ಬಗ್ಗೆ ಡೇಟಾಬೇಸ್ ಕಲೆಹಾಕುವಿಕೆ ಮತ್ತು ಪಟ್ಟಿಯ ಸಿದ್ಧತೆ– ಇವುಗಳೆಲ್ಲ ನಡೆಯುತ್ತಿವೆ. ಎಲ್ಲರಿಗೂ ಈ ಲಸಿಕೆ ಕೊಡಬೇಕಿರುವುದರಿಂದ ಇದು ಶತಮಾನದ ಲಸಿಕೆ ಕಾರ್ಯಕ್ರಮ ಎನ್ನಿಸಿಕೊಳ್ಳಲಿದೆ. ಯೋಜನೆಯ ಗಾತ್ರ ಬೃಹತ್ ಆಗಿರುವಂತೆಯೇ ಸವಾಲುಗಳೂ ಬೆಟ್ಟದಷ್ಟಿರುವುದು ಸಹಜ. ದೇಶದ ಎಲ್ಲಪ್ರಜೆಗಳಿಗೂ ಕೋವಿಡ್ ಲಸಿಕೆ ಒದಗಿಸುವ ದೃಷ್ಟಿಯಿಂದ ವಿಶೇಷ ಕೋವಿಡ್ ಪ್ರತಿರೋಧ ಕಾರ್ಯಕ್ರಮವನ್ನು ಜಾರಿಗೆ ತರಲಾಗುತ್ತದೆ ಹಾಗೂ ಇದಕ್ಕಾಗಿ ರಾಜ್ಯಗಳು ಪ್ರತ್ಯೆ?ಕ ಕಾರ್ಯಕ್ರಮಗಳನ್ನು ರೂಪಿಸುವ ಅಗತ್ಯವಿಲ್ಲ ಎಂದು ಕೇಂದ್ರ ಸರಕಾರ ಇತ್ತಿ?ಚೆಗೆ ತಿಳಿಸಿತ್ತು. ಲಸಿಕೆಯನ್ನು ಕೇಂದ್ರವೇ ಒದಗಿಸಲಿದೆಯಾದರೂ ಅದರ ಸಂಗ್ರಹ ಹಾಗೂ ವಿತರಣೆಯನ್ನು ರಾಜ್ಯ ಆರೋಗ್ಯ ಸೇವಾ ವ್ಯವಸ್ಥೆಯೇ ಕೈಗೊಳ್ಳಬೇಕಿದೆ. ಲಸಿಕೆ ಆವಿಷ್ಕಾರದ ದಿನಗಳು ದೂರವಿಲ್ಲಎಂದು ಭಾವಿಸಿ, ಎಲ್ಲರಿಗೂ ಲಸಿಕೆ ದೊರೆಯುವಂತೆ ಮಾಡುವ ಒಂದು ಪರಿಣಾಮಕಾರಿ ಮೂಲ ವ್ಯವಸ್ಥೆಯನ್ನು ನಾವು ಈಗಲೇ ರೂಪಿಸಿಕೊಳ್ಳಬೇಕಿದೆ.

ರಾಜ್ಯದ ಜನಸಂಖ್ಯೆ ಸುಮಾರು 7 ಕೋಟಿ ಸಮೀಪಿಸುತ್ತಿದೆ. ಪ್ರತಿಯೊಬ್ಬರಿಗೂ ಎರಡು ಡೋಸ್ ನೀಡಬೇಕು; ಅಂದರೆ 14 ಕೋಟಿ. ತೀರಾ ಸಾಮಾನ್ಯ ಮನುಷ್ಯನಿಗೂ ಇದು ತಲುಪಬೇಕು– ಅಂದರೆ ಕಾರ್ಯಕ್ರಮದ ಅಗಾಧ ವ್ಯಾಪ್ತಿಯನ್ನು ಲೆಕ್ಕಿಸಬಹುದು. ಮೊದಲ ಹಂತದಲ್ಲಿಆರೋಗ್ಯ ಸೇವಾ ಸಿಬ್ಬಂದಿ, ಆಶಾ ಕಾರ್ಯಕರ್ತರು ಮುಂತಾದ ಕೋವಿಡ್ ವಾರಿಯರ್ಸ್, ನಂತರ ಪೊಲೀಸರು, ಸೈನ್ಯ, ಮುನ್ಸಿಪಲ್ ಸಿಬ್ಬಂದಿ, ನಂತರ 50 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು, 50 ವರ್ಷ ಕೆಳಗಿನ ಆದರೆ ಗಂಭೀರ ಆರೋಗ್ಯ ಸಮಸ್ಯೆಗಳಿರುವವರು, ಜೊತೆಗೆ ಮಕ್ಕಳು– ಈ ಸ್ವರೂಪದಲ್ಲಿಲಸಿಕೆ ನೀಡಿಕೆಯ ಆದ್ಯತೆ ಇರಲಿದೆ. ಆದರೆ ಈ ವರ್ಗೀಕರಣದ ಜಾರಿಗೆ ಸರಿಯಾದ ಒಂದು ಕ್ರಿಯಾಯೋಜನೆ ರೂಪಿಸಿ, ನಿರ್ದಿಷ್ಟ ಗುಂಪುಗಳನ್ನು ಗುರುತಿಸಿ ಅವರೆಲ್ಲರೂ ಲಸಿಕೆಯನ್ನು ಕಡ್ಡಾಯವಾಗಿ ಪಡೆಯುವಂಥ ಒಂದು ನೀತಿಯನ್ನು ತರುವುದು ಅಗತ್ಯ. ಯಾರೊಬ್ಬರೂ ಈ ಲಸಿಕೆ ಯೋಜನೆಯಿಂದ ಹೊರಗೆ ಉಳಿಯದಂಥ, ದೀನದುರ್ಬಲರೂ ಇದರಿಂದ ವಂಚಿತವಾಗದಂಥ ಸಮಗ್ರ ವ್ಯವಸ್ಥೆಯೊಂದನ್ನು ರೂಪಿಸುವುದು ಅಗತ್ಯ. ಇದರ ಅನುಷ್ಠಾನ ಕಷ್ಟ, ಆದರೆ ಅನಿವಾರ್ಯ. ಯಾಕೆಂದರೆ ನಮ್ಮಲ್ಲಿ ಯೋಜನೆಗಳು ಅದರ ನೈಜ ಫಲಾನುಭವಿಗಳನ್ನು ತಲುಪುವುದು ಕಷ್ಟ ಎಂಬ ಆಡಳಿತಾತ್ಮಕ, ರಾಜಕೀಯ ಪರಿಸ್ಥಿತಿ ಇದೆ.


ಕೋವಿಡ್ ರೋಗಿಗಳಿಗಾಗಿ ಮೀಸಲಿಟ್ಟ ಹಾಸಿಗೆಗಳು ಅಗತ್ಯವಿರುವ ಬಡವರಿಗೆ ಲಭ್ಯವಾಗುತ್ತಿಲ್ಲ ಹಾಗೂ ಪ್ರಭಾವಿಗಳು ಅವುಗಳನ್ನು ಪಡೆದುಕೊಂಡದ್ದನ್ನು ನಾವು ಗಮನಿಸಿದ್ದೆ?ವೆ. ಇದನ್ನು ಗಮನಿಸಿದರೆ, ಲಸಿಕೆ ಕಾರ್ಯಕ್ರಮದ ಪೂರ್ವಯೋಜನೆ ಎಷ್ಟು ಪಾರದರ್ಶಕವಾಗಿದ್ದರೂ ಸಾಲದು. ಕೋವಿಡ್ ನಿರ್ವಹಣೆಯಲ್ಲಿ ಸಂಭವಿಸಿದ ವೈಫಲ್ಯ, ಲಸಿಕೆ ನೀಡುವಿಕೆಯಲ್ಲೂನಡೆಯದಂತೆ ನೋಡಿಕೊಳ್ಳುವುದು ಅಗತ್ಯವಾಗಿದೆ. ಪ್ರಭಾವಿಗಳು ಇದನ್ನು ದುರುಪಯೋಗಪಡಿಸಿಕೊಳ್ಳಬಹುದು. ಭ್ರಷ್ಟಾಚಾರ, ನಷ್ಟ, ಅಸಮರ್ಪಕ ವಿತರಣೆ, ತಾಂತ್ರಿಕ ಸಮಸ್ಯೆ– ಎಲ್ಲವೂ ಕಾಡಬಹುದು. ಆದರೆ ಇವೆಲ್ಲವನ್ನೂ ಮೀರಿಯೂ ಒಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಇಚ್ಛಾಶಕ್ತಿ ಮತ್ತು ಪಾರದರ್ಶಕ ಅನುಷ್ಠಾನದಿಂದ ಸಾಧ್ಯವಿದೆ. ಮುಂದಿನ ವರ್ಷ ಜುಲೈ ಒಳಗೆ 25 ಕೋಟಿ ಮಂದಿಗೆ ಎರಡು ಡೋಸ್‌ನಂತೆ 50 ಕೋಟಿ ಲಸಿಕೆ ನೀಡಲು ಸರಕಾರ ಸಜ್ಜಾಗುತ್ತಿದೆ ಎಂದು ಕೇಂದ್ರ ಆರೋಗ್ಯ ಸಚಿವ ಡಾ. ಹರ್ಷವರ್ಧನ್ ಹೇಳಿದ್ದರು. ಅದಕ್ಕೂ ಮುನ್ನ ನೀಲನಕ್ಷೆ ಪೂರ್ತಿಯಾಗಬೇಕು. ನೀಲನಕ್ಷೆ ಸಮರ್ಪಕವಾಗಿದ್ದರೆ ಎಷ್ಟೆ? ದೊಡ್ಡ ಕಟ್ಟಡವನ್ನೂ ಗಟ್ಟಿಯಾಗಿ ಎಬ್ಬಿಸಿ ನಿಲ್ಲಿಸಬಹುದು.

## ಒದುಗರ ಪತ್ರ

ಮೈಸೂರು ವಿಶ್ವವಿದ್ಯಾನಿಲಯ ಆವರಣ ತುಂಬಾ ವಿಶಾಲವಾಗಿ ಕೂಡಿದೆ ಉತ್ತಮವಾದ ಪರಿಸರ ಹಾಗೂ ಉದ್ಯಾನಗಳ ತೋಗುಯ್ಯಾಲೆಯಂತೆ ಹಸಿರಿನಿಂದ ಸುತ್ತುವರೆದಿದೆ ಗಂಗೋತ್ರಿಯ ಆವರಣದಲ್ಲಿ ಹಸಿರಿನ ಜೊತೆಗೆ ಕಸವು ಸಹ ಇದೆ ಏಕೆಂದರೆ ಹಸಿರಿನೊಂದಿಗೆ ಪ್ಲಾಸ್ಟಿಕ್ ಹಾಗೂ ಇನ್ನಿತರ ಚಾಕೊಲೇಟ್ ಕವರ್ ಪೇಪರ್ ಹತ್ತು ರೂಪಾಯಿಯ ಜ್ಯೂಸ್ ಬಾಟಲ್ ಇಂತಹ ವಸ್ತುಗಳಿಂದ ಕೂಡಿದೆ ಇದರಿಂದ ಪರಿಸರವು ಕೂಡಿರುತ್ತದೆ ಪ್ಲಾಸ್ಟಿಕ್ ಪರಿಸದಲ್ಲಿ ಕೊಳೆಯುವುದಿಲ್ಲ ಆದರೆ ಅದು ಪರಿಸರಕ್ಕೆ ಹಾನಿಯನ್ನು ಮಾಡುತ್ತೆ 739 ಏಕರೆಯಿಂದ ವಿಶಾಲವಾಗಿದ್ದು ಎಲ್ಲಿಯೂ ಕಸದ ಬುಟ್ಟಿಯು ಇಲ್ಲ ದಕ್ಷಿಣ ಭಾರತದ ಆರನೇ ಹಳೆಯ ವಿಶ್ವವಿದ್ಯಾನಿಲಯ ಎಂಬ ಹೆಗ್ಗಳಿಕೆ ಪಾತ್ರವಾಗಿರುವ ವಿದ್ಯಾನಿಲಯ ಕಸದ ಬುಟ್ಟಿಯನ್ನು ಗಂಗೋತ್ರಿಯ ಅವರದಲ್ಲಿ ಇಡಲು ಮತ್ತು ಇದಕ್ಕೆ ಸಂಬಂಧ ಪಟ್ಟ ಅಧಿಕಾರಿಗಳು ಕ್ರಮಕ್ಕೆ ಮುಂದಾಗಬೇಕು ಎಂದು ನಿಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಜೊತೆಗೆ ನಮ್ಮ ಕ್ಯಾಂಪಸ್‌ನಲ್ಲಿ ಪ್ಲಾಸ್ಟಿಕ್‌ನ ಬಳಕೆ ಹೆಚ್ಚಾಗಿದೆ. ಇದನ್ನು ಸಹ ತವು ಪರಿಶೀಲಿಸಬೇಕು. ನಮ್ಮ ಕ್ಯಾಂಪಸ್ ಸುತ್ತಲು ಪ್ಲಾಸ್ಟಿಕ್ ಕಂಡು ಬರುತ್ತಿದ್ದು ಅದನ್ನು ತೆಗೆಸುವ ಕಾರ್ಯ ಮೊದಲು ಆಗಬೇಕಿದೆ. ಇಲ್ಲದಿದ್ದರೆ, ನಮ್ಮ ಕ್ಯಾಂಪಸ್ ಪ್ಲಾಸ್ಟಿಕ್‌ನಿಂದ ಸಂಪೂರ್ಣವಾಗಿ ಮುಚ್ಚಿಹೊಗುತ್ತದೆ. ಆದ್ದರಿಂದ ಇದರ ಬಗ್ಗೆ ಗಮನ ನೀಡಬೇಕಾಗಿ ಮನವಿ ಮಾಡುತ್ತೇನೆ.

ಸುರೇಶ ಎಸ್
ದ್ವಿತೀಯ ವರ್ಷ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಮಾನಸಗಂಗೋತ್ರಿ ಮೈಸೂರು

## ಭಾರತ ದೇಶದೊಳಗಿನ ಕತೆ



ಕಳೆದ ಎರಡು ವಾರಗಳಲ್ಲಿ ಭಾರತದ 30 ಏರ್ಪೋರ್ಟ್ ಮತ್ತು 77 ಬಂದರುಗಳಲ್ಲಿ ಕೊವಿಡ್–19ರ ತಪಾಸಣೆಗೆ ಒಳಗಾಗಿರುವವರ ಸಂಖ್ಯೆ 10,57,506.

ದೇಶಕ್ಕೆ ಯಾವೆಲ್ಲ ಮಾರ್ಗಗಳಲ್ಲಿ ವೈರನ ಪ್ರವೇಶವಾಗಬಹುದೋ ಅಂಥ ಎಲ್ಲ ದಾರಿಗಳನ್ನೂ ಸರಕಾರ ಶೀಘ್ರಾತಿಶೀಘ್ರವಾಗಿ ಮುಚ್ಚಿದೆ. ಭಾರತ–ಮಯನ್ಮಾಗಳ ನಡುವಿನ ಗಡಿಗೆ ಬೀಗ ಬಿದ್ದಿದೆ. ದೇಶದಿಂದ ಹೊರಹೋಗುವ ಮತ್ತು ದೇಶದೊಳಕ್ಕೆ ಬರುವ ವ್ಯಕ್ತಿಗಳ ವಿಷಯದಲ್ಲಿ ಸರಕಾರ ಹದ್ದಿನ ಕಣ್ಣಿಟ್ಟಿದೆ. ಎಲ್ಲ ಸರಕಾರೀ ಆಸ್ಪತ್ರೆಗಳಲ್ಲಿ ಕೊವಿಡ್–19 ರೋಗಿಗಳ ಉಪಚಾರಕ್ಕೆ ಬೇಕಾದ ಸರ್ವ ಏರ್ಪಾಟನ್ನು ಮಾಡಲಾಗಿದೆ.

ಇನ್ನು ಭಾರತದಲ್ಲಿ ಆರೋಗ್ಯವಿಮೆಯ ಸೌಲಭ್ಯ ಪಡೆಯುವವರ ಸಂಖ್ಯೆಯಾದರೂ ಎಷ್ಟು? ಬರೋಬ್ಬರಿ ಐವತ್ತು ಕೋಟಿ. ಇಂಗ್ಲೆಂಡಿನ ಸಂಖ್ಯೆಗಿಂತ ಎಂಟುಪಟ್ಟು! ಹಾಗಂತ ಈ ದೇಶದಲ್ಲಿ ಆರೋಗ್ಯ ಸೌಲಭ್ಯ ತುಟ್ಟಿಯೇನಲ್ಲ. ಜಗತ್ತಿನ ಬಹುತೇಕ ಎಲ್ಲ ಅಭಿವೃದ್ಧಿಹೊಂದಿದ ದೇಶಗಳಿಗೆ ಹೋಲಿಸಿದರೂ ಭಾರತದಲ್ಲಿ ಸಿಗುವ ಔಷಧಗಳ ದರ ಅತ್ಯಂತ ಕಡಿಮೆ. ಜನೌಷಧಿಯ ಪ್ರಯೋಜನ ಪಡೆವವರಿಗೆ ಅದನ್ನೇನೂ ಪ್ರತ್ಯೇಕವಾಗಿ ಹೇಳಬೇಕಿಲ್ಲ! "ಥ್ಯಾಂಕ್ ಗಾಡ್, ಈ ಕೊರೋನಾ ವೈರಸ್ ಭಾರತದಲ್ಲಿ ಮೊದಲು ತನ್ನ ಪ್ರತಾಪ ತೋರಿಸಲಿಲ್ಲ" ಎಂದು ವ್ಯಂಗ್ಯವಾಡುವವರು ಅರ್ಥ ಮಾಡಿಕೊಳ್ಳಬೇಕು: 2018ರಲ್ಲಿ ನಿಪಾ ವೈರಸ್ ಪತ್ತೆಯಾದಾಗ, ಅದನ್ನು ಅತ್ಯಂತ ಕ್ಷಿಪ್ರವಾಗಿ ವಿಶ್ವ ಆರೋಗ್ಯ ಸಂಸ್ಥೆಯ ಗಮನಕ್ಕೆ ತಂದದ್ದು ಭಾರತ. ಕೂಡಕೂಡಲೇ ಕೈಗೊಂಡ ಕ್ರಮಗಳಿಂದಾಗಿ ನಿಪಾದ ಉಗ್ರಪ್ರತಾಪ 17 ಜನರ ಮರಣಕ್ಕೇ ಸೀಮಿತವಾಯಿತು. ಆದರೆ ಚೀನಾದಲ್ಲಿ ಕೊವಿಡ್–19 ರೋಗವನ್ನು ಪತ್ತೆಹಚ್ಚಿದ ವೈದ್ಯನನ್ನು ಸರಕಾರವೇ ಮೌನವಾಗಿರಿಸಿತು. ದುರಂತ ನೋಡಿ – ರೋಗಪತ್ತೆ ಮಾಡಿದ ಆರು ವಾರಗಳಲ್ಲಿ ಆ ವೈದ್ಯನೇ ತೀರಿಕೊಂಡುಬಿಟ್ಟ!

ಭಾರತದ ಬಗ್ಗೆ ಇಷ್ಟೆಲ್ಲ ವಿಷಯ ಹಂಚಿಕೊಳ್ಳಲು ಕಾರಣನಾದ ಬ್ರಿಟನ್ ಎಕಾನಮಿಸ್ಟ್ (& ಬುದ್ಧಿಜೀವಿ!!) ಜಿಮ್ ಓ'ನೀಗೆ ಕೃತಜ್ಞತೆಗಳು. "ಥ್ಯಾಂಕ್ ಗಾಡ್! ಈ ರೋಗ ಭಾರತದಲ್ಲಿ ಪ್ರಾರಂಭವಾಗಲಿಲ್ಲಪ್ಪ!" ("ಆಗಿದ್ದರೆ ಕತೆ ಏನು! ದೇಶಕ್ಕೆ ದೇಶವೇ ರೋಗದಿಂದ ಮಕಾಡೆ ಮಲಗುತ್ತಿತ್ತು" – ಎಂಬುದು ಮಾತಿನ ಒಳಾರ್ಥ) ಎಂದು ಗೇಲಿಮಾತುಗಳನ್ನಾಡಿದ ಶ್ರೀಯುತ ಜಿಮ್ ಓ'ನೀಲ್ ಅವರೇ, ಸಾಧ್ಯವಾದರೆ ನಿಮ್ಮ ದೇಶದ ರಾಜಕುಮಾರ ಚಾರ್ಲ್ಸ್ ಅನ್ನು ಭೇಟಿಯಾಗಿ ಭಾರತದ ಬಗ್ಗೆ ಸ್ವಲ್ಪ ಅವರಿಂದ ತಿಳಿದುಕೊಳ್ಳಿ. ಭೇಟಿಯ ಪ್ರಾರಂಭದಲ್ಲೇ ರಾಜಕುಮಾರ ಚಾರ್ಲ್ಸ್ ನಿಮ್ಮನ್ನು ಕೈ ಕುಲುಕಿ ಅಪ್ಪಿಕೊಳ್ಳುವ ಬದಲು ದೂರದಲ್ಲೇ ನಿಲ್ಲಿಸಿ 'ನಮಸ್ತೆ' ಎಂದು ಕೈಜೋಡಿಸಿ ಸ್ವಾಗತಿಸಿದರೆ ಮುಖ ಸಿಂಡರಿಸಬೇಡಿ ಮತ್ತೆ!

## ಹೆಣ್ಣಲ್ಲವೇ ನಾನು...!!!



ಹುಟ್ಟಿನಿಂದಲೇ ಅಸಡ್ಡೆ ತೋರಿದರು,
ಎಲ್ಲವನ್ನೂ ಮೆಟ್ಟಿ ನಿಲ್ಲಲು
ಪ್ರಯತ್ನಿಸುತ್ತಿರುವೆ...

ಏಕೆಂದರೆ ಹೆಣ್ಣಲ್ಲವೇ ನಾನು.
ಸಮಾಜದ ಕಟ್ಟುಪಾಡುಗಳಿಗೆ ತಲೆದೂಗಿ,
ಸಮಾನತೆಯನೇ ಕಾಣದಾಗಿರುವೆ....

ಏಕೆಂದರೆ ಹೆಣ್ಣಲ್ಲವೇ ನಾನು.
ಸ್ವಾತಂತ್ರ್ಯ ಮರಿಚಿಕೆಯಾಗಿ,
ಕಾಳಜಿಯ ಚಕ್ರವ್ಯೂಹದೊಳು
ಬಂಧಿಯಾಗಿರುವೆ....

ಏಕೆಂದರೆ ಹೆಣ್ಣಲ್ಲವೇ ನಾನು.
ಕಡುಕಷ್ಟ ಬಂದರು, ಜೀವನ ಸಾಕಾದರು,
ತುಟಿಯಂಚಲಿ ನಗುವಿಟ್ಟು
ಎಲ್ಲರಲು ನಗುತರುವೆ...
ಏಕೆಂದರೆ ಹೆಣ್ಣಲ್ಲವೇ ನಾನು.

ನನ್ನದೆನ್ನುವ ಎಲ್ಲಾ ಪಾತ್ರಗಳನ್ನು ನಾ ಮೌನವಾಗೆ ನಿಭಾಯಿಸುವೆ, ನಾನು
ನಾನಾಗಿರಲು ಮಾತ್ರ ಹಿಂದೇಟು
ಹಾಕುತಿರುವೆ... ಏಕೆಂದರೆ ಹೆಣ್ಣಲ್ಲವೇ ನಾನು.

**ಹರ್ಷಿತಾ**




## ಪ್ರಾಣವನ್ನೇ ತೆಗೆಯುವ 'ಕರೋನಾ ವೈರಸ್' ಹಬ್ಬುತ್ತಿದೆ, ಇರಲಿ ಎಚ್ಚರ!

ಕೊರೊನಾ ವೈರಸ್ ಎಂದರೆ ಸಾಮಾನ್ಯ ವೈರಸ್ ಗಳ ಒಂದು ಗುಂಪು. ವೈರಸ್ ಗಳ ಮೇಲ್ಮೈಯಲ್ಲಿ ಕಿರೀಟದಂತಹ ವಿನ್ಯಾಸವಿರುವ ಕಾರಣದಿಂದಾಗಿ ಹೀಗೆ ಹೆಸರಿಡಲಾಗಿದೆ...

ಕೊರೋನಾ ಅಥವಾ ಕರೋನವೈರಸ್ ಒಂದು ಬಗೆಯ ಪ್ರಾಣಹಾನಿ ಉಂಟುಮಾಡುವಂತಹ ವೈರಸ್ ಆಗಿದ್ದು ಇದು ಮನುಷ್ಯನ ಸಹಿತ ಸಸ್ತನಿಗಳ ಉಸಿರಾಟದ ವ್ಯವಸ್ಥೆ ಮೇಲೆ ಪರಿಣಾಮ ಬೀರುವುದು ಎಂದು ಹೇಳಲಾಗುತ್ತಿದೆ.

ಈ ವೈರಸ್ ನಿಂದಾಗಿ ಸಾಮಾನ್ಯ ಶೀತ, ನ್ಯೂಮೋನಿಯ ಮತ್ತು ಮತ್ತು ತೀವ್ರ ರೀತಿಯ ಶ್ವಾಸಕೋಶದ ಸಮಸ್ಯೆ ಕಾಣಿಸಿಕೊಳ್ಳುವುದು ಮತ್ತು ಇದು ಹೊಟ್ಟೆಯ ಮೇಲೂ ಪರಿಣಾಮ ಬೀರುವುದು.

ಕೆಲವು ಕೊರೊನಾ ವೈರಸ್‌ಗಳು ತೀವ್ರ ರೀತಿಯ ಲಕ್ಷಣಗಳನ್ನು ತೋರಿಸುವುದು. ಈ ಸೋಂಕು



ಬ್ರಾಂಕೈಟಿಸ್ ಅಥವಾ ನ್ಯುಮೋನಿಯಾ ಆಗಿ ಪರಿವರ್ತನೆ ಆಗಬಹುದು.

ಇದರ ಪ್ರಮುಖ ಲಕ್ಷಣಗಳು ಕಫದೊಂದಿಗೆ ಕೆಮ್ಮು ಉಸಿರು ಕಟ್ಟುವಿಕೆ ಎದೆ ನೋವು ಅಥವಾ ಕೆಮ್ಮು ಅಥವಾ ಉಸಿರಾಟದ ವೇಳೆ ಬಿಗಿ ಹಿಡಿತ ಹೃದಯ ಮತ್ತು ಶ್ವಾಸಕೋಶದ ಕಾಯಿಲೆ ಇರುವವರಲ್ಲಿ ಈ ತೀವ್ರವಾದ ಲಕ್ಷಣಗಳು ಸಾಮಾನ್ಯ.

ಇದರೊಂದಿಗೆ ದುರ್ಬಲ ಪ್ರತಿರೋಧಕ ವ್ಯವಸ್ಥೆ ಹೊಂದಿರುವಂತಹ ಶಿಶುಗಳು ಮತ್ತು ವಯಸ್ಸಾದವರಲ್ಲಿ ಇದು ಸಾಮಾನ್ಯ.

### ಕೊರೊನಾ ವೈರಸ್ ಸೋಂಕು ಎಂದರೇನು?


ಕೊರೊನಾ ವೈರಸ್ ಎಂದರೆ ಸಾಮಾನ್ಯ ವೈರಸ್ ಗಳ ಒಂದು ಗುಂಪು. ವೈರಸ್ ಗಳ ಮೇಲ್ಮೈಯಲ್ಲಿ ಕಿರೀಟದಂತಹ ವಿನ್ಯಾಸವಿರುವ ಕಾರಣದಿಂದಾಗಿ ಹೀಗೆ ಹೆಸರಿಡಲಾಗಿದೆ.

ಕೆಲವು ಕೊರೊನಾ ವೈರಸ್ ಕೇವಲ ಪ್ರಾಣಿಗಳ ಮೇಲೆ ಮಾತ್ರ ಪರಿಣಾಮ ಬೀರುವುದು.ಇನ್ನು ಕೆಲವು ವೈರಸ್ ಗಳು ಮನುಷ್ಯರ ಮೇಲೆ ಕೂಡ ಪರಿಣಾಮ ಬೀರುವುದು.

ಇದು ಸಾಮಾನ್ಯ ಶೀತದಂತಹ ಲಘು ಪ್ರಮಾಣದಿಂದ ಮಧ್ಯಮ ಪ್ರಮಾಣದ ಮೇಲ್ಭಾಗದ ಶ್ವಾಸಕೋಶದ ಸೋಂಕನ್ನು ಉಂಟು ಮಾಡುವುದು. ಆದರೆ ಇದು ಕೆಲವೊಂದು ಸಲ ತೀವ್ರ ರೀತಿಯ ನ್ಯುಮೋನಿಯಾ ಮತ್ತು ಬ್ರಾಂಕೈಟಿಸ್ ಉಂಟು ಮಾಡುವುದು. ಮನುಷ್ಯರನ್ನು ಕಾಡುವಂತಹ ಕೊರೊನಾ ವೈರಸ್ ನಲ್ಲಿ ಹಲವು ವಿಧಗಳು ಇವೆ.

## ಕೊರೊನಾ ವೈರಸ್ ಹಬ್ಬುವುದು ಹೇಗೆ?

*ಸಾಮಾನ್ಯವಾಗಿ ಕೊರೊನಾ ವೈರಸ್ ಒಬ್ಬ ಮನುಷ್ಯನಿಂದ ಮತ್ತೊಬ್ಬನಿಗೆ ಹಬ್ಬುವುದು.



*ಶೀನು ಮತ್ತು ಕೆಮ್ಮಿನ ಗಾಳಿಯಿಂದ.
*ತುಂಬಾ ಹತ್ತಿರ ದೈಹಿಕ ಸಂಪರ್ಕದಿಂದ. ಉದಾಹರಣೆಗೆ ಸ್ಪರ್ಶ ಮತ್ತು ಹಸ್ತಲಾಘವ
*ವೈರಸ್ ಇರುವ ವಸ್ತುವನ್ನು ಮುಟ್ಟುವುದು, ಇದರ ಬಳಿಕ ಬಾಯಿ, ಮೂಗು ಅಥವಾ ಕಣ್ಣುಗಳನ್ನು ಕೈ ತೊಳೆಯದೆ ಮುಟ್ಟಿದರೆ.
*ಅಪರೂಪದಲ್ಲಿ ಮಲದ ಮೂಲಕ

### ಕೊರೊನಾ ವೈರಸ್ ನ ಕೆಲವು ಲಕ್ಷಣಗಳು ಯಾವುದು?

ಕೊರೊನಾ ವೈರಸ್ ಯಾವ ರೀತಿಯದ್ದು ಮತ್ತು ಸೋಂಕು ಎಷ್ಟು ಗಂಭೀರವಾಗಿದೆ ಎನ್ನುವುದರ ಮೇಲೆ ಇದರ ಲಕ್ಷಣವು ಅವಲಂಬಿಸಿದೆ.

ಶೀತದಂತಹ ಶ್ವಾಸಕೋಶದ ಮೇಲ್ಭಾಗದ ಸೋಂಕಿಗೆ ಒಳಗಾಗಿದ್ದರೆ ಆಗ ನಿಮ್ಮಲ್ಲಿ ಈ ರೀತಿಯ ಕೆಲವು ಲಕ್ಷಣಗಳೂ ಕಾಣಿಸಿಕೊಳ್ಳುವುದು.

*ಮೂಗು ಸೋರುವುದು
*ತಲೆನೋವು
*ಕೆಮ್ಮು
*ಗಂಟು ನೋವು
*ಜ್ವರ
*ಸಂಪೂರ್ಣವಾಗಿ ಅನಾರೋಗ್ಯ

## ಕೊರೊನಾ ವೈರಸ್ ತಡೆಯಬಹುದೇ?



ಕೊರೊನಾ ವೈರಸ್ ಸೋಂಕಿಗೆ ಯಾವುದೇ ರೀತಿಯ ನಿರ್ದಿಷ್ಟ ಚಿಕಿತ್ಸೆಗಳಿಲ್ಲ. ಕೆಲವು ಜನರು ಅವರಾಗಿಯೇ ಚೇತರಿಸಿಕೊಳ್ಳುವರು. ಆದರೆ ಇದರ ಲಕ್ಷಣಗಳನ್ನು ಈ ರೀತಿಯಾಗಿ ಕಡಿಮೆ ಮಾಡಬಹುದು.

ಈಗ ಮನುಷ್ಯರಲ್ಲಿ ಕಾಡುವ ಕೊರೊನಾ ವೈರಸ್ ಗೆ ಯಾವುದೇ ರೀತಿಯ ಔಷಧಿಯಿಲ್ಲ. ಆದರೆ ಇದು ಹರಡದಂತೆ ತಡೆಯುವ ಮೂಲಕ ಅಪಾಯವನ್ನು ಕಡಿಮೆ ಮಾಡಬಹುದು. ಇದಕ್ಕೆ ನೀವು ಈ ರೀತಿ ಮಾಡಿ.

*ಸೋಪ್ ಮತ್ತು ನೀರು ಹಾಕಿ 20 ಸೆಕೆಂಡು ಕಾಲ ಕೈ ತೊಳೆಯಿರಿ.
* ತೊಳೆಯದೆ ಮುಖ, ಮೂಗು ಅಥವಾ ಬಾಯಿಯನ್ನು ಮುಟ್ಟಲು ಹೋಗಬೇಡಿ.
*ಅನಾರೋಗ್ಯದಲ್ಲಿರುವ ಜನರೊಂದಿಗೆ ಹತ್ತಿರದ ಸಂಪರ್ಕವಿಟ್ಟುಕೊಳ್ಳಬೇಡಿ.
*ಪದೇ ಪದೇ ಮುಟ್ಟುತ್ತಲಿರುವ ಜಾಗವನ್ನು ಆಗಾಗ ಚೆನ್ನಾಗಿ ಸ್ವಚ್ಛ ಮಾಡಿಟ್ಟುಕೊಳ್ಳಿ.
*ಕೆಮ್ಮು ಮತ್ತು ಶೀನು ಬಂದ ವೇಳೆ ಟಿಶ್ಯೂ ಅಡ್ಡ ಹಿಡಿಯಿರಿ. ಇದರ ಬಳಿಕ ಟಿಶ್ಯೂ ಬಿಸಾಕಿ, ಕೈಗಳನ್ನು ತೊಳೆಯಿರಿ.
*ಅನಾರೋಗ್ಯವಿದ್ದರೆ ಮನೆಯಲ್ಲೇ ಉಳಿಯಿರಿ.
*ನೋವು, ಜ್ವರ ಮತ್ತು ಕೆಮ್ಮಿಗೆ ಮಾತ್ರೆ ತೆಗೆದುಕೊಳ್ಳುವುದು. ಮಕ್ಕಳಿಗೆ ಆಸ್ಪಿರಿನ್ ಕೊಡಬೇಡಿ. ನಾಲ್ಕು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಕೆಮ್ಮಿನ ಔಷಧಿ ನೀಡಬೇಡಿ.
*ಕೆಮ್ಮು ಮತ್ತು ಗಂಟಲು ನೋವು ಕಡಿಮೆ ಮಾಡಲು ಬಿಸಿ ನೀರಿನ ಸ್ನಾನ ಮಾಡುವುದು ಒಳ್ಳೆಯದು.
*ಸಾಕಷ್ಟು ವಿಶ್ರಾಂತಿ ಪಡೆಯಿರಿ.
ನೀರಿನಾಂಶ ಹೆಚ್ಚು ಸೇವಿಸಿ.

## ಆ ತಲೆನೋವಿಗೆ ಮದ್ದು ನಾವೇ ಮಾಡಿಕೊಳ್ಳಬೇಕು..!

ಮನುಷ್ಯನಿಗೆ ತಲೆನೋವು ಹಲವು ಕಾರಣಗಳಿಗೆ ಬರಬಹುದು. ದೈಹಿಕ ಕಾರಣಗಳಿಗೆ ಬರುವ ತಲೆನೋವು ಒಂದೆಡೆಯಾದರೆ, ಮಾನಸಿಕವಾಗಿಯೂ ತಲೆನೋವು ಕಾಡಬಹುದು. ಇತ್ತೀಚೆಗಿನ ದಿನಗಳಲ್ಲಿ ತಲೆನೋವನ್ನು ನಾವೇ ನಮ್ಮ ಕೈಯ್ಯಾರೆ ತಂದು ಕೊಳ್ಳುತ್ತಿದ್ದೇವೆ. ಇದಕ್ಕೆ ಕಾರಣ ಶಿಸ್ತುಬದ್ಧವಿಲ್ಲದ ಯಾಂತ್ರಿಕ ಜೀವನ. ಸದಾ ಜನ ಜಂಗುಳಿ ನಡುವೆ ಒತ್ತಡದ, ಪೈಪೋಟಿಯ ಬದುಕು, ಮಾಡಲೇಬೇಕಾದ ಕೆಲಸದ ಅನಿವಾರ್ಯತೆ, ದೈಹಿಕ ಶ್ರಮಕ್ಕಿಂತಲೂ ಹೆಚ್ಚಾಗಿ ಮಾನಸಿಕ ಶ್ರಮ, ಜತೆಗೆ ಸದಾ ಮೊಬೈಲ್, ಟಿವಿ ನೋಡುವುದು ಹೀಗೆ ಹತ್ತಾರು ಕಾರಣಗಳಿಂದ ಮಾನಸಿಕವಾಗಿ ತಲೆನೋವು ನಮ್ಮನ್ನು ಬಾಧಿಸುತ್ತಿದೆ. ಇನ್ನು ಯಾವುದಾದರೊಂದು ವಿಷಯದ



ಬಗ್ಗೆಯೇ ಹೆಚ್ಚು ಚಿಂತೆ ಮಾಡುವುದು. ಅದರ ಸುತ್ತಲೂ ಇಲ್ಲ ಸಲ್ಲದ ಕಲ್ಪನೆ ಮಾಡಿಕೊಂಡು ನರಳುವುದು, ನಿದ್ದೆಗೆಡುವುದು ಕೂಡ ತಲೆನೋವಿಗೆ ಕಾರಣವಾಗುತ್ತಿದೆ.

### ಆ ತಲೆನೋವಿಗೆ ಔಷಧಿ ನಮ್ಮಲ್ಲೇ ಇದೆ

ಕೆಲವರು ಬೇಕು ಬೇಕಂತಲೇ ರಗಳೆಗಳನ್ನು ಮೈಮೇಲೆ ಎಳೆದುಕೊಳ್ಳುತ್ತಾರೆ. ಆ ನಂತರ ಆ ವಿಚಾರಕ್ಕೆ ಸಂಬಂಧಿಸಿದಂತೆ ತಲೆಕೆಡಿಸಿಕೊಳ್ಳುತ್ತಾರೆ. ಇದು ಮಾನಸಿಕವಾಗಿ ಅವರನ್ನು ಕಾಡುತ್ತದೆ. ಅದು ತಲೆ ನೋವಿಗೂ ಕಾರಣವಾಗಿ ಬಿಡುತ್ತದೆ.

ದೈಹಿಕವಾಗಿ ಬರುವ ತಲೆನೋವುಗಳಿಗೆ ಔಷಧಿಗಳಿಂದ ಪರಿಹಾರ ನೀಡಬಹುದು. ಆದರೆ ಮಾನಸಿಕವಾಗಿ ಬರುವತಲೆನೋವುಗಳಿಗೆ ಔಷಧಿಗಳನ್ನು ನಾವೇ ಕಂಡು ಹಿಡಿದುಕೊಳ್ಳುವುದು ಅನಿವಾರ್ಯವಾಗಿದೆ.

## ಕರ್ವಾಲೋ



ಒಂದೇ ಸಾಲಿನಲ್ಲಿ ಹೇಳುವುದಾದರೇ "ಕರ್ವಾಲೋ ಸೃಜನಶೀಲವಾಗಿದೆ". ನಿರೂಪಣೆಯ ರೀತಿಯಲ್ಲೇ ಆಗಲಿ, ವಸ್ತುವಿನ ಆಯ್ಕೆಯಲ್ಲೇ ಆಗಲಿ ಲೇಖಕರಾದ ತೇಜಸ್ವಿಯವರು ತೋರಿಸಿರುವ ಸೃಜನಶೀಲತೆ ನಿಜವಾಗಿಯೂ ಪ್ರಶಂಸನೀಯ. "ಬದುಕಿನ ಅನುಭವಗಳನ್ನೇ ಕಾದಂಬರಿಯ ರೂಪದಲ್ಲಿ ಬರೆದಿರುವ ಪರಿ ಗಮನಾರ್ಹ".

ತಮಾಷೆಯಾಗಿಯೇ ಸಾಗುವ ಕರ್ವಾಲೋದ ಪಯಣ ಕೊನೆ ಕೊನೆಗೆ ವೈಜ್ಞಾನಿಕತೆ ಮತ್ತು ವೈಚಾರಿಕತೆಯ ವಿವಿಧ ಮಜಲುಗಳಿಗೆ ತನ್ನನ್ನು ತೆರೆದುಕೊಂಡಿರುವುದು ವಿಶೇಷ. ಮನುಷ್ಯ, ಪರಿಸರ, ಪರಿಸರ ಉಳಿಸಿಕೊಂಡಿರುವ ಅಚ್ಚರಿಗಳು, ಜೈವಿಕ ಪ್ರಬೇಧಗಳು, ಹಳ್ಳಿ ಸೊಗಡು, ಸಾಮಾನ್ಯರಲ್ಲಿ ಸಾಮಾನ್ಯರ ಜೀವನಶೈಲಿ ಹೀಗೆ ಜೀವನಕ್ಕೆ ಹತ್ತಿರವಾದ ಹಲವಾರು ವಿಷಯಗಳ ರಸಾಯನವೇ "ಕರ್ವಾಲೋ" ವ್ಯವಹಾರದಲ್ಲಿ ಮೋಸವಿರುವ ಗುಮಾನಿಯಿದ್ದರೂ ಪೂಚಂತೇರವರು ಕೊಳ್ಳುತ್ತಾರೆ. ಮನೆಗೆ ಹೋಗಿ ನೋಡಿದಾಗ ಕೊಬ್ಬರಿ ಎಣ್ಣೆಯಂತೆ ಕಾಣುತ್ತಿದೆ ಎಂದು ಮನೆಯ ಕೆಲಸದಾಳು ಪ್ಯಾರಾ ಹೇಳುತ್ತಾನೆ. ಕುಪಿತರಾಗುವ ಪೂಚಂತೇ ಉಳಿಸಿಕೊಂಡಿದ್ದ ಬಾಕಿ ಹಣವನ್ನು ನೀಡಲು ಹೋದಾಗ ಮಂದಣ್ಣ ವಿವಿಧವಾದ ಜೇನುಹುಳುಗಳ ಕುರಿತು ತಿಳಿಸುತ್ತಾನೆ. ಮೊದಲಿಗೆ ಕೇವಲ ಜೇನು ತುಪ್ಪವನ್ನು ಖರೀದಿಸಲು ಹೋಗಿದ್ದ ಲೇಖಕರು ಮಂದಣ್ಣನ ವಿವರಣೆಯಿಂದಾಗಿಯೋ ಅಥವಾ ತಮ್ಮ ಪರಿಸರದೆಡೆಗಿನ ಅದಮ್ಯ ಅಚ್ಚರಿಗಳಿಂದಲೋ ಅವನ ಉಸ್ತುವಾರಿಯಲ್ಲಿ ಕೊನೆಗೆ ಜೇನನ್ನೇ ಸಾಕುವ ಸಾಹಸಕ್ಕೆ ಕೈ ಹಾಕುತ್ತಾರೆ.

ಈ ಎಲ್ಲಾ ಪಾತ್ರಗಳು ಸಹ್ಯಾದ್ರಿಯ ತಪ್ಪಲಿನಲ್ಲಿ ಏನನ್ನೋ ಹುಡುಕಲು ಹೋಗುತ್ತಾರೆ. ಇಷ್ಟೆಲ್ಲಾ ಜಿಜ್ಞಾಸೆಗಳನ್ನು ಇಷ್ಟೆಲ್ಲಾ ಮೌಲ್ಯಗಳನ್ನು ಒಮ್ಮೆಲೆ ಲೇಖಕರಿಗೆ ತರಿಸಿ ಅದನ್ನು ಓದುಗರಿಗ ಪ್ರವಾಹಿಸಿದ ಅನ್ವೇಷಣೆಯಾದರೂ ಏನು? ಉತ್ತರ ಪುಸ್ತಕದಲ್ಲಿ.

ಅನೇಕ ದೃಶ್ಯಾವಳಿಗಳು ನಗು ತರಿಸಿದರೂ ಒಂದು ರೀತಿಯ ಅಗಾಧ ಚಿಂತನೆಗೆ ಓದುಗನನ್ನು ಒಡ್ಡುತ್ತವೆ ಎಂಬುದು ಸುಳ್ಳಲ್ಲ. ಮೇಲ್ನೋಟಕ್ಕೆ ಹಗುರವಾಗಿ ಕಂಡು ಬಂದರೂ ಪುಸ್ತಕ ಮುಚ್ಚಿಟ್ಟ ಕೆಲವು ಘಳಿಗೆಯ ನಂತರ ಪುಸ್ತಕ ಬಹಳವಾಗಿ ಕಾಡುತ್ತದೆ. ಅಂದ ಹಾಗೇ, "ಕರ್ವಾಲೋ" ಎಂದರೆ ಏನು? ಸಹ್ಯಾದ್ರಿಯಲ್ಲಿ ಹುಡುಕಲು ಹೊರಟ ಸಂಜೀವಿನಿಯ ಹೆಸರಾ? ಪುಸ್ತಕ ಓದಿ ಅಚ್ಚರಿಗೆ ಸಾಕ್ಷಿಯಾಗಿಬಿಡಿ!!!

**ಅಭಿಷೇಕ್ ಎಸ್**

**ಸಂಪಾದಕರು**
ಪ್ರೋ. ಪುಟ್ಟಸ್ವಾಮಿ

**ಅಧ್ಯಪಾಕ ಸಲಹೆಗಾರರು**
ಡಾ॥ ಕೆ.ಎಸ್. ಕುಮಾರಸ್ವಾಮಿ

**ವಿದ್ಯಾರ್ಥಿ ಸಂಪಾದಕರು**
ಆದರ್ಶ ಹೆಚ್.ಎಂ
ಆಶಾ ಹೆಚ್.ಎಂ
ಆದರ್ಶ ಖೆಡ್ಗಿ
**ಪುಟ ವಿನ್ಯಾಸ : ಆದರ್ಶ ಹೆಚ್.ಎಂ**